ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯೋಜನಾ ನಿಮಯ ಉಲ್ಲಂಘನೆ.

2658(3028) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಸಂಭವಿಸಿರುವ ನಗರ ಯೋಜನಾ ನಿಯಮ ಉಲ್ಲಂಘನೆಯ ಪ್ರಕರಣಮೆಷ್ಟು, ಹೂಡಲಾಗಿರುವ ಪ್ರಕರಣಗಳೆಷ್ಟು; ತೀರ್ಪು ನೀಡಿರುವುದೆಷ್ಟು, ವಸೂಲಾದ ದಂಡದ ಮೊಬಲಗು ಎಷ್ಟು;

ಆ) ಈ ರೀತಿಯ ಪದೇ ಪದೇ ನಿಯಮ ಉಲಂಘನೆಯನ್ನು ತಪ್ಪಿಸಲು ಕೈಗೊಂಡಿರುವ ಕ್ರಮವೇನು?.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) 1. ಉಲ್ಲಂಘನೆ ಮಾಡಿರುವುದು 110

2. ಪ್ರಕರಣಗಳನ್ನು ದಾಖಲಿಸಿಕೊಂಡು ಇತ್ಯರ್ಥಗೊಳಿಸಿರುವವು 80

3. ವಸೂಲಿ ಮಾಡಲಾಗಿರುವ ದಂಡ ರೂ. 55,000

ಆ) ನಿಯಮಗಳು ಉಲ್ಲಂಘನೆಯಾಗದಂತೆ ತೀವ್ರ ನಿಗಾ ಇಡಲು ಕ್ರಮ ಜರುಗಿಸಲಾಗುತ್ತಿದೆ.

ಹೂವಿನ ಹಡಗಲಿ ರೇಷ್ಮೆ ಇಲಾಖೆ ಸಿಬ್ಬಂದಿ ಕಡಿತಗೊಳಿಸುವಿಕೆ

2659 (3434) ಶ್ರೀ ವಿ.ಬಿ. ಹಾಲಪ್ಪ (ಹಡಗಲಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಹಡಗಲಿ ತಾಲ್ಲೂಕಿನ ರೇಷ್ಮೆ ಇಲಾಖೆ ನಿಷ್ಕ್ರಿಯವಾಗಿದ್ದು ಸಿಬ್ಬಂದಿಯನ್ನು ಕಡಿತ ಮಾಡಲು ಪ್ರಸ್ತಾವನೆ ಸರ್ಕಾರಕ್ಕೆ ತಲುಪಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಮುಂದಿನ ಕ್ರಮವೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

1) ಹೂವಿನ ಹಡಗಲಿ ತಾಲ್ಲೂಕಿನಲ್ಲಿ 1360 ಹೆಕ್ಟೇರ್ ಹಿಪ್ಪುನೇರಳೆ ವ್ಯವಸಾಯವಿದ್ದು ವಾರ್ಷಿಕ 2,268 ಮೆಟ್ರಿಕ್ ಟನ್ ರೇಷ್ಮೆ ಗೂಡು ಬೆಲೆಸಲಾಗುತ್ತಿದೆ. ಈ ತಾಲ್ಲೂಕಿನಲ್ಲಿ

ಒಂದು ತಾಂತ್ರಿಕ ಸೇವಾ ಕೇಂದ್ರವಿದ್ದು ಈ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಯ ಹುದ್ದೆಯನ್ನು ಉನ್ನತೀಕರಿಸಿ ಅನೇಕರಿಗೆ ಸ್ಥಳಾಂತರಿಸಲಾಗಿದೆ. ಉಳಿದ ಸಿಬ್ಬಂದಿಯಲ್ಲಿ ಕನಿಷ್ಠ ಸಿಬ್ಬಂದಿಯನ್ನು ಹೊರತುಪಡಿಸಿ ಉಳಿದ ಸಿಬ್ಬಂದಿಯನ್ನು ಹೊಸದಾಗಿ ಸೃಜನೆಯಾಗಿರುವ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ಪೌರಕಾರ್ಮಿಕರಿಗೆ ಗೃಹ ಮತ್ತು ನಿವೇಶನದ ಕೊರತೆ.

2660 (3032) ಶ್ರೀ ಜಬ್ಬಾರ್ ಖಾನ್ ಹೆಚ್. ಹೊನ್ನಳ್ಳಿ (ಹುಬ್ಬಳ್ಳಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ನಗರಪಾಲಿಕೆಯ ಪೌರಕಾರ್ಮಿಕರ ಗೃಹ ಮತ್ತು ನಿವೇಶನಗಳ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಎಷ್ಟು ಮನೆಗಳನ್ನು ಕಟ್ಟಲು ಸರ್ಕಾರ ಅನುಮತಿ ನೀಡಿದೆ.?

ಇ) ಮನೆಗಳಿಲ್ಲದ ಪೌರ ಕಾರ್ಮಿಕರ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) ಒಟ್ಟು 200 ಮನೆಗಳನ್ನು ಕಟ್ಟುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಒಟ್ಟು 768.

ಮಹಾನಗರಪಾಲಿಕೆಯಲ್ಲಿ 1092 ಪೌರ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು ಅವರಲ್ಲಿ 324 ಪೌರಕಾರ್ಮಿಕರಿಗೆ ಮನೆಗಳನ್ನು ನೀಡಲಾಗಿದೆ. ಉಳಿದ 768 ಪೌರಕಾರ್ಮಿಕರಿಗೆ ಮನೆಗಳನ್ನು ನೀಡಬೇಕಾಗಿದೆ.

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಲಾದ ನಿವೇಶನಗಳ ಸಂಖ್ಯೆ

2661 (3033) ಶ್ರೀ ಜಬ್ಬಾರ್ ಖಾನ್ ಹೈಯತ್ ಖಾನ್ ಹೊನ್ನಳ್ಳಿ (ಹುಬ್ಬಳ್ಳಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ 1999 ರಿಂದ 2001ನೇ ಸಾಲಿನವರೆಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ.